# ಕೃಷ್ಣಾ ಗ್ರಾಮೀಣ ಬ್ಯಾಂಕ

## ಪ್ರಧಾನ ಕಚೇರಿ: ಕುಸನೂರು ರಸ್ತೆ, ಗುಲಬರ್ಗಾ – ೫೮೫೧೦೫

## ವಿವಿಧ ಠೇವಣಿಗಲ ರೂಪು-ರೇಷೆ ಮತ್ತು ವಿವರಣೆ

ತಾವು ನಮ್ಮ ಬ್ಯಾಂಕ್‌ನ ಯಾವುದೇ ಶಾಖೆಯಲ್ಲಿ ಈ ಕೆಳಗಿನ ಠೇವಣಿಗಳನ್ನು ಜಮಾ ಮಾಡಿ ಅವುಗಳ ಲಾಭಗಳನ್ನು ಪಡೆಯುಬಹುದು.

೧) ಉಳಿತಾಯ ಖಾತೆ.
೨) ಚಾಲ್ತಿ ಖಾತೆ.
೩) ಅವಧಿ ಆಧರಿತ ಟರ್ಮ್ ಠೇವಣಿಗಳು
೪) ಸ್ಪೇಶಲ್ – ಅವಧಿ ಆಧರಿತ ಟರ್ಮ್ ಠೇವಣಿಗಳು
೫) ರಿಕರಿಂಗ್ ಠೇವಣಿಗಳು (ನಿರ್ಧರಿತ ಸಮಯಗಳಲ್ಲಿ ಕಂತು ಜಮಾ ಮಾಡುವ ಸೌಲಭ್ಯ)
೬) ಕೃಷ್ಣಾ ಬೆಳ್ಳಿ ಹಬ್ಬದ ಠೇವಣಿಗಳು
೭) ಕೃಷ್ಣಾ ಟ್ಯಾಕ್ಸ್ ಸೇವರ್ ಯೋಜನೆ.

ಮೇಲಿನ ಎಲ್ಲ ಠೇವಣಿಗಳಿಗೂ ನಾಮಾಂಕನ ಸೌಲಭ್ಯವು ಈ ಕೆಳಗಿನಂತೆ ಇರುವುದು.

೧) ನಾಮಾಂಕನ ಸೌಲಭ್ಯವು ಎಲ್ಲ ತರಹದ ಠೇವಣಿಗಳಿಗೆ ಲಭ್ಯವಿರುವುದಾದರೂ, ಠೇವಣಿದಾರರು ಸೌಲಭ್ಯವನ್ನು ಪಡೆಯಲು ಇಚ್ಛಿಸಿದಲ್ಲಿ ಆ ಬಗ್ಗೆ ಲಿಖಿತ ಸೂಚನೆ ನೀಡುವುದು ಅನಿವಾರ್ಯವಾಗಿದೆ.
೨) ಪ್ರತ್ಯೇಕ ಠೇವಣಿ ಖಾತೆಗಳಿಗೆ ಪ್ರತ್ಯೇಕ ನಾಮಾಂಕನವನ್ನು ಮಾಡಬಹುದು.
೩) ಒಮ್ಮೆ ಕೊಟ್ಟ ನಾಮಾಂಕನವನ್ನು ಎಷ್ಟು ಸಲ ಬೇಕೋ ಅಷ್ಟು ಸಲ ಬದಲಾಯಿಸಲೂ ಬಹುದು.

ಮೇಲಿನ ಎಲ್ಲ ಠೇವಣಿಗಳ ಠೇವಣಿದಾರರಿಗೆ ಅವಶ್ಯವಿದ್ದಲ್ಲಿ, ಠೇವಣಿ ಅವಧಿಯ ಯಾವುದೇ ಸಮಯದಲ್ಲಿ ಠೇವಣಿ ಮೊತ್ತ ಮತ್ತು ಆಕರಣೆಯಾದ ಬಡ್ಡಿ ಇವುಗಳ ಮೊತ್ತದ ಶೇಕಡ ೭೫ ರಷ್ಟು ಸಾಲ ಪಡೆಯುವ ಅವಕಾಶವಿರುತ್ತದೆ.

ಸೂಚನೆ:-

೧) ತೀರ ಹೊಸದಾದ ಹಾಗೂ ಇಂದಿನ ಬಡ್ಡಿದರಗಳಿಗಾಗಿ ನಮ್ಮ ಯಾವುದೇ ಶಾಖೆ ಅಥವಾ ಪ್ರಾದೇಶಿಕ ಕಚೇರಿಯನ್ನು ಸಂಪರ್ಕಿಸಿ.
೨) ಠೇವಣಿದಾರರು ನಿವಾಸಿ ಭಾರತೀಯರಾಗಿರಬೇಕಲ್ಲದೇ, ಭಾರತೀಯ ರಿಸರ್ವ್ ಭಾಂಕ್‌ನ ಕೇ.ವೈ.ಸಿ: 'ನಿಮ್ಮ ಗ್ರಾಹಕರನ್ನು ಅರಿಯಿರಿ' ನಿರ್ದೇಶನಗಳನ್ನು ಪಾಲಿಸಬೇಕು.
೩) ತಾವುಗಳು ಈ ಪುಟವನ್ನು ನೋಡಬಹುದು, ಅಥವಾ ಪ್ರಿಂಟ್ ಮಾಡಬಹುದು ಮತ್ತು ತಮ್ಮ ಗಣಕ ಯಂತ್ರದಲ್ಲಿ ಉಳಿಸಬಹುದು ಕೂಡ.

ವಿವಿಧ ಠೇವಣಿಗಳ ರೂಪು ರೇಷೆಗಾಗಿ ಮುಂದಿನ ಪುಟವನ್ನು ನೋಡಿರಿ.

# ಕೃಷ್ಣಾ ಗ್ರಾಮೀಣ ಬ್ಯಾಂಕ

## ಪ್ರಧಾನ ಕಚೇರಿ: ಕುಸನೂರು ರಸ್ತೆ, ಗುಲಬರ್ಗಾ – ೫೮೫೧೦೫

## ವಿವಿಧ ಠೇವಣಿಗಲ ರೂಪು-ರೇಷೆ ಮತ್ತು ವಿವರಣೆ

## ವಿವಿಧ ಠೇವಣಿಗಳ ರೂಪು ರೇಷೆ

### ೧. ಕೃಷ್ಣಾ ಗ್ರಾಮೀಣ ಬ್ಯಾಂಕ್ ಬೆಳ್ಳಿ ಹಬ್ಬದ ಠೇವಣಿಗಳು

| | | |
|---|---|---|
| ೧ | ಠೇವಣಿ ಯೋಜನೆಯ ಹೆಸರು | ಕೃಷ್ಣಾ ಗ್ರಾಮೀಣ ಬ್ಯಾಂಕ್ ಬೆಳ್ಳಿಹಬ್ಬದ ಠೇವಣಿಗಳು |
| ೨ | ಯೋಜನೆಯ ಪ್ರಾರಂಭಿಕ ದಿನಾಂಕ | ೦೯–೦೩–೨೦೦೭ |
| ೩ | ಈ ಯೋಜನೆಯು ಚಾಲ್ತಿಯಲ್ಲಿರುವುದು | ಮುಂದಿನ ನಿರ್ದೇಶನಗಳ ತನಕ |
| ೪ | ನ್ಯೂನತಮ (ಕನಿಷ್ಠ) ಠೇವಣಿ | ರೂ.೨೫,೦೦೦–೦೦ |
| ೫ | ನ್ಯೂನತಮ (ಕನಿಷ್ಠ) ಅವಧಿ | ಒಂದು ವರುಷ |
| ೬ | ಗರಿಷ್ಠ ಅವಧಿ | ಎರಡು ವರುಷ |
| ೭ | ನಿವಾಸಿ ಭಾರತೀಯರಿಗೆ ಬಡ್ಡಿ ದರ | ಶಾಖೆಯನ್ನು ಸಂಪರ್ಕಿಸಿ |
| ೮ | ವರಿಷ್ಠ ನಾಗರಿಕರಿಗೆ ಬಡ್ಡಿ ದರ | ಶಾಖೆಯನ್ನು ಸಂಪರ್ಕಿಸಿ |
| ೯ | | |

### ೨. ಕೃಷ್ಣಾ ಸುಪರ್ ಸೇವರ್ ಸಾವಧಿ ಠೇವಣಿಗಳು

| | | |
|---|---|---|
| ೧ | ಠೇವಣಿ ಯೋಜನೆಯ ಹೆಸರು | ಕೃಷ್ಣಾ ಸೂಪರ್ ಸೇವರ್ ಸಾವಧಿ ಠೇವಣಿಗಳು |
| ೨ | ಯೋಜನೆಯ ಪ್ರಾರಂಭಿಕ ದಿನಾಂಕ | ೦೧–೦೬–೨೦೦೬ |
| ೩ | ಈ ಯೋಜನೆಯು ಚಾಲ್ತಿಯಲ್ಲಿರುವುದು | ಮುಂದಿನ ನಿರ್ದೇಶನಗಳ ತನಕ |
| ೪ | ನ್ಯೂನತಮ (ಕನಿಷ್ಠ) ಠೇವಣಿ | ರೂ.೨೫,೦೦೦–೦೦ |
| ೫ | ನ್ಯೂನತಮ (ಕನಿಷ್ಠ) ಅವಧಿ | ಆರು ವರುಷ |
| ೬ | ಗರಿಷ್ಠ ಅವಧಿ | ಹತ್ತು ವರುಷ |
| ೭ | ನಿವಾಸಿ ಭಾರತೀಯರಿಗೆ ಬಡ್ಡಿ ದರ | ೮%: ತ್ರೈಮಾಸಿಕ ಬಡ್ಡಿ ಆಕರಣೆ |
| ೮ | ವರಿಷ್ಠ ನಾಗರಿಕರಿಗೆ ಬಡ್ಡಿ ದರ | ೮.೫%: ತ್ರೈಮಾಸಿಕ ಬಡ್ಡಿ ಆಕರಣೆ |